1225 ಕಿ.ಮೀ. ಉದ್ದದ ರಸ್ತೆಗಳನ್ನು ಮೂರು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಸುಮಾರು 18.00 ಕೋಟಿ ರೂ. ವೆಚ್ಚ ತಗುಲಲಿದೆ.

(ಈ) ದುಸ್ಥಿತಿಯಲ್ಲಿದ್ದ ರಸ್ತೆಗಳ ದುರಸ್ತಿ ಕೆಲಸ ಪ್ರಗತಿಯಲ್ಲಿದ್ದು, ಪ್ರಥಮ ಹಂತದಲ್ಲಿ 45 ರಸ್ತೆಗಳನ್ನು ಅಗಲೀಕರಣಗೊಳಿಸಲು ಉದ್ದೇಶಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.

(ಉ) 45 ಅಗಲೀಕರಣಗೊಳಿಸುವ ರಸ್ತೆಗಳ ಸರ್ವೆ ಕಾರ್ಯ ಮುಗಿದ ನಂತರ ಅಂದಾಜುಗಳನ್ನು ತಯಾರಿಸಲಾಗುವುದು. ಈ ಕಾರ್ಯಕ್ಕೆ ಪೂರಕವಾಗಿ 1000 ಕಿ.ಮೀ. ರಸ್ತೆ ಅಭಿವೃದ್ಧಿ ಕಾರ್ಯವನ್ನು 130.00 ಕೋಟಿ ರೂ.ಗಳಲ್ಲಿ ತೆಗೆದುಕೊಳ್ಳಲಾಗಿದೆ. ಪ್ರತಿ ಹಣಕಾಸ ವರ್ಷದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುದಾನವನ್ನು ಮೀಸಲಿಡಲಾಗುತ್ತದೆ.

(ಊ) 10 (ಹತ್ತು).

(ಋ) ಹೌದು.

1) ಹೆಚ್ಚು ವಾಹನ ಸಂಚಾರವಿರುವ ಈ ಕೆಳಗಿನ ಸ್ಥಳಗಳಲ್ಲಿ ಮೇಲು ಸೇತುವೆ/ ಆರ್.ಓ.ಬಿ./ ಆರ್.ಯು.ಬಿ. ಗಳನ್ನು ನಿರ್ಮಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಉದ್ದೇಶಿಸಿದೆ.

1) ಯಶವಂತಪುರ ವೃತ್ತ
2) ಮಿನರ್ವ ವೃತ್ತ
3) ಬೈಯಪ್ಪನಳ್ಳಿ ಹತ್ತಿರ ಆರ್.ಓ.ಬಿ/ ಆರ್.ಯು.ಬಿ.
4) ಐ.ಟಿ.ಸಿ. ಕಾರ್ಖಾನೆ ಹತ್ತಿರ ಆರ್.ಓ.ಬಿ.
5) ಕನಕಪುರ ರಸ್ತೆ ಮತ್ತು ವರ್ತುಲ ರಸ್ತೆ ಜಂಕ್ಷನ್
6) ಮತ್ತಿಕೆರೆ ಆರ್.ಓ.ಬಿ.
7) ಗಂಗೊಂಡನಹಳ್ಳಿ ಆರ್.ಓ.ಬಿ.

2) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರ ವರ್ತುಲ ರಸ್ತೆ ಮತ್ತು ಎಲೆಕ್ಟಾನ್ ಸಿಟಿಗಳ ನಡುವೆ ಯೋಜಿತ ಹೈಟೆಕ್ ಸಿಟಿ ಕಾರಿಡಾರ್ ರಸ್ತೆಯಲ್ಲಿ ಎರಡು (2) ಮೇಲ್ಸೇತುವೆಗಳನ್ನು ನಿರ್ಮಿಸಲು ಯೋಜಿಸಿರುತ್ತದೆ.

2274(2234) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಚಾವತ್ ನ್ಯಾಯಾಧೀಕರಣದಂತೆ ಕರ್ನಾಟಕ ರಾಜ್ಯಕ್ಕೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸ್ಕೀಂ 'ಎ' ಅನ್ವಯ ಬಿ.ಎಂ.ಸಿ.ಯಲ್ಲಿ ನೀರು ಹಂಚಿಕೆಯಾಗಿರುವ ಪ್ರಮಾಣವೆಷ್ಟು;

ಆ) ಈ ನೀರಿನ ಹಂಚಿಕೆಯನ್ನು ಯಾವ ಯಾವ ನದಿಗಳು, ಉಪ ನದಿಗಳು ಹಾಗೂ ಜಲಾಶಯಗಳಿಂದ ಭಾರಿ ನೀರಾವರಿ, ಮಧ್ಯಮ ನೀರಾವರಿ ಹಾಗೂ ಸಣ್ಣ ನೀರಾವರಿಯಗಳಿಗೆ ಹಂಚಿಕೆಯಾಗಿರುವ ನೀರಿನ ಪ್ರಮಾಣವೆಷ್ಟು (ಪೂರ್ಣ ಮಾಹಿತಿ ಒದಗಿಸುವುದು).

ಇ) ಈ ನೀರಿನ ಹಂಚಿಕೆಯಲ್ಲಿ ಕೃಷ್ಣ ಜಲಾಶಯದ ಅಂತರ್ಜಲವು ಸೇರಿದೆಯೆ;

ಈ) ಹಾಗಿದ್ದಲ್ಲಿ, ಅದರ ಪ್ರಮಾಣವೆಷ್ಟು;

ಊ) ಬಚಾವತ್ ಆಯೋಗದ ಪ್ರಕಾರ ಸ್ಕೀಂ 'ಎ' ದಲ್ಲಿ ಕೃಷ್ಣಾ ಜಲಾನಯನದಿಂದ ನೀರು ನೀಡುತ್ತಿರುವ ಭೂಮಿಯ ವಿಸ್ತೀರ್ಣ ಎಷ್ಟು ಹಾಗೂ ನೀರು ಕೊಡಲು ಸರ್ಕಾರ ಉದ್ದೇಶಿಸಿರುವ ಪ್ರಮಾಣ ಎಷ್ಟು (ನೀರು ಹಾಗೂ ಭೂಮಿ ವಿವರ ನೀಡುವುದು);

ಋ) ಬಚಾವತ್ ಆಯೋಗದ ನೀರಿನ ಹಂಚಿಕೆಯಂತೆ 2005ರ ಜನವರಿಗೆ ನೀರನ್ನು ನೀರಾವರಿಗೆ ಬಳಸಲಾಗುತ್ತಿರುವ ಪ್ರಮಾಣವೆಷ್ಟು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) ಹಾಗೂ ಭಾರಿ ನೀರಾವರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ನೀರಿನ ಸಂಗ್ರಹಣೆ ಜಲಾಶಯಕ್ಕೆ ಹಾಗೂ ಕಾಲುವೆಗೆ ವೆಚ್ಚ ಮಾಡಲಾಗಿರುವ ಹಣವೆಷ್ಟು (ಜಲಾಶಯವಾರು ವಿವರ ನೀಡುವುದು);

(ಋ) ಬಚಾವತ್ ಆಯೋಗದ ನೀರಿನ ಹಂಚಿಕೆಯಂತೆ ಸಂಪೂರ್ಣ ನೀರಾವರಿ ಮಾಡಲು ಇನ್ನು ಅವಶ್ಯವಿರುವ ಹಣವೆಷ್ಟು ಹಾಗೂ ಈ ಕಾಮಗಾರಿ ಪೂರ್ಣಗೊಳ್ಳಲು ಬೇಕಾಗಿರುವ ಕಾಲಾವಕಾಶ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ:- (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯಕ್ಕೆ ಕೃಷ್ಣಾ ನದಿ ಕೊಳ್ಳದಲ್ಲಿ ಸ್ಕೀಂ 'ಎ' ನಂತೆ ಹಂಚಿಕೆಯಾಗಿರುವ ನೀರಿನ ಪ್ರಮಾಣ (700+34) 734 ಟಿ.ಎಂ.ಸಿ.ಗಳು.

ಆ) ಕೃಷ್ಣ ಕೊಳ್ಳದಲ್ಲಿ ರಾಜ್ಯಕ್ಕೆ ಲಭ್ಯವಾಗಿರುವ 734 ಬಿ.ಎಂ.ಸಿ. ನೀರಿನ ಪೈಕಿ ವಿವಿಧ ಯೋಜನೆಗಳಿಗೆ ಮರುಹಂಚಿಕೆ ಮಾಡಲಾಗಿರುವ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಬಚಾವತ್ ಆಯೋಗದ ಸ್ಕೀಂ 'ಎ' ನ (ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ) ಯೋಜನೆಗಳಿಂದ ಈವರೆಗೆ 20,28,760 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಹಾಗೂ ಬಾಕಿ 6,10,735 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ.

ಋ) ಜನವರಿ 2005ಕ್ಕೆ ನೀರಾವರಿ ಸೃಷ್ಟಿಸಲಾಗಿರುವ ಹಾಗೂ ಬಾಕಿ ನೀರಾವರಿ ಕ್ಷೇತ್ರದ ಮತ್ತು ಈವರೆಗಿನ ವೆಚ್ಚಗಳ ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ೠ) ಕೃಷ್ಣ ಕೊಳ್ಳದ ರಾಜ್ಯದ ಪಾಲಿನ ನೀರಿನ ಸಂಪೂರ್ಣ ಬಳಕೆ ಮಾಡಲು ರೂ. 8319.54 ಕೋಟಿಗಳು ಅವಶ್ಯಕತೆ ಇದೆ. ಹಾಗೂ ಎಲ್ಲಾ ಯೋಜನೆಗಳನ್ನು 2006-07ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಅನುಬಂಧ

ಸ್ಕೀಂ 'ಎ' ಅಡಿಯಲ್ಲಿ ವಿಮರ್ಶಿತ ಯೋಜನೆಗಳ ಪಟ್ಟಿ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಉಪ ಕೊಳ್ಳ	2002ರ ಪುನರ್ ಹಂಚಿಕೆಯ ಪ್ರಮಾಣ (ಟಿ.ಎಂ.ಸಿ.)	ನೀರಾವರಿ ಕ್ಷೇತ್ರ ಹೆಕ್ಟೇರ್‌ಗಳಲ್ಲಿ			ರೂ. ಕೋಟಿಗಳಲ್ಲಿ	
				ಉದ್ದೇಶಿತ	ಸೃಷ್ಟಿಸಲಾದ	ಬಾಕಿ	ಈವರೆಗಿನ ವೆಚ್ಚ	ಬಾಕಿ
1	2	3	4	5	6	7	8	9
I. ಪೂರ್ಣಗೊಂಡ ಯೋಜನೆಗಳು								
1.	ಆರೆಶಂಕರ	K-2	0.20	1255	1255	0	0.22	–
2.	ಚಿತ್ರವಡಗಿ	K-2	0.10	891	891	0	0.41	–
3.	ಕಲಾಸ್ಕೋಪ್	K-3	0.14	1143	1143	0	0.20	–
4.	ಗೋಕಾಕ್ ಕಾಲುವೆ	K-3	1.40	5757	5757	0	0.00	–
5.	ಕೊಳ್ಳಿವಿಯರ್	K-4	0.70	1275	1275	0	0.43	–
6.	ನಾಗಠಾಣ	K-6	0.12	650	650	0	0.15	–
7.	ರಾಮನಹಳ್ಳಿ	K-6	0.32	1943	1943	0	0.42	–
8.	ಸೌಧಾಗರ್	K-6	0.26	1417	1417	0	5.57	–

1	2	3	4	5	6	7	8	9
9.	ಹತ್ತಿಕುಣಿ	K-6	0.40	2145	2145	0	0.84	–
10.	ಮುಲ್ಲಾಮಾರಿ ಮೇಲ್ದಂಡೆ	K-6	1.08	3279	3279	0	19.64	–
11.	ಚಂದ್ರಂಪಳ್ಳಿ	K-6	1.90	5223	5223	0	1.85	–
12.	ಜಂಟಿದ ಹಳ್ಳ	K-8	0.70	1538	1538	0	1.15	–
13.	ನಾರಿಹಳ್ಳ	K-8	0.90	1512	1512	0	3.20	–
14.	ಕನಕನಾಲಾ	K-8	0.27	2064	2064	0	1.00	–
15.	ಅಂಬ್ಲಿ ಗೋಳ	K-8	1.10	2955	2955	0	1.16	–
16.	ಅಂಜನಾಪುರ	K-8	2.50	6736	6736	0	0.21	–
17.	ಧರ್ಮ	K-8	1.10	5668	5668	0	1.33	–
18.	ಹಗರಿಬೊಮ್ಮನಹಳ್ಳಿ	K-8	2.00	2966	2966	0	3.95	–
19.	ರಾಜೋಲಿಬಂದಾ	K-8	1.20	2380	2380	0	0.52	–
20.	ತುಂಗಾ ಅಣೆಕಟ್ಟು	K-8	11.50	8704	8704	0	3.31	–
21.	ಭದ್ರಾ ಜಲಾಶಯ	K-8	61.70	105570	105570	0	179.77	–
22.	ಭದ್ರಾ ಅಣೆಕಟ್ಟು	K-8	3.10	4466	4466	0	0.00	–
23.	ತುಂಗಭದ್ರಾ	K-8	132.00	3521.42	352142	0	338.83	45.42
24.	ವಿಜಯನಗರ ಕಾಲುವೆ	K-8	12.05	12210	12210	0	0.00	–

1	2	3	4	5	6	7	8	9
25.	ಗಾಯತ್ರಿ	K-8	0.45	2305	2305	0	0.40	–
26.	ನಾರಾಯಣಪುರ	K-9	0.74	1624	1624	0	0.34	–
27.	ವಾಣಿವಿಲಾಸ ಸಾಗರ	K-9	5.25	9190	9190	0	0.45	
		ಒಟ್ಟು I=	**243.18**	**547008**	**547008**	**0**	**565.35**	**45.42**
			II. ಪ್ರಗತಿಯಲ್ಲಿರುವ ಯೋಜನೆಗಳು					
1.	ದೂಧ್‌ಗಂಗಾ	K-1	4.00	19668	3000	16668	27.11	50.03
2.	ಕೃಷ್ಣಾ ಮೇಲ್ಕಂಡೆ ಯೋಜನೆ	K-2	173.00	622020	485799	136221	13670.88	2000.00
3.	ಹಿಪ್ಪರಗಿ	K-2	12.10	70070	3434	66636	109.48	752.84
4.	ಘಟಪ್ರಭಾ–1,2,3	K-3	87.70	317447	261388	56059	770.12	284.37
5.	ಮಾರ್ಕಂಡೇಯ	K-3	4.00	32375	0	32375	203.26	78.44
6.	ಮಲಪ್ರಭಾ	K-4	27.00	218191	192201	25990	721.75	157.01
7.	ಹಿರಿನಾರಾ	K-4	0.64	4370	3838	532	46.29	2.67
8.	ಅಮರ್ಜಾ	K-6	1.92	8903	7802	1101	96.72	15.97
9.	ಬೆಣ್ಣೆತೋರಾ	K-6	5.75	20236	8502	11734	234.63	58.14
10.	ಮುಲ್ಲಾಮಾರಿ ಕೆಳದಂಡ	K-6	2.61	9713	7666	2047	134.55	18.09
11.	ಭೀಮಾ ಏ.ನೀ.ಯೋ.	K-6	6.00	24282	0	24282	20.95	160.56

1	2	3	4	5	6	7	8	9
12.	ಗಂಡೋರಿನಾಲಾ	K-6	2.16	8094	1890	6204	94.83	65.49
13.	ಓರೇಹಳ್ಳ	K-8	2.27	8013	1714	6299	176.24	2.67
14.	ಮುನ್ನಿನಾಲಾ	K-8	0.78	2833	2724	10950	41.69	5.389
15.	ರಾಣಿಕೆರೆಗೆ ಪೂರಕ ನಾಲೆ	K-8	0.30	3238	283	2955	9.49	–
16.	ಸಿಂಗಟ್‌ಲೂರ್ ಏ.ನೀ.ಯೋ.	K-8	18.55	47750	0	47750	28.74	553.93
17.	ತುಂಗಾ ಮೇಲ್ಗಂಡೆ	K-8	12.24	94700	0	94700	383.67	564.07
		ಒಟ್ಟು II=	**361.02**	**1511903**	**980241**	**531662**	**16770.40**	**4769.66**
			III. ಹೊಸ ಯೋಜನೆಗಳು					
1.	ತೆಗ್ಗಿ ಸಿದ್ದಾಪುರ ಏ.ನೀ.ಯೋ	K-2	0.90	3000	–	3000	–	30.4
2.	ಜವಲಹಳ್ಳ	-	0.29	1400	–	1400	–	3.33
3.	ಬೆಳ್ಳಾರಿನಾಲಾ ಏತ	K-3	1.91	7500	–	7500	–	138.24
4.	ರಾಮತಾಳ್ ಏ.ನೀ.ಯೋ.	K-4	4.50	26200	–	26200	–	114.05
5.	ಕೊಣ್ಣೂರು ಏ.ಣಿ.ಯೋ.	K-4	0.39	2000	–	2000	–	6.15
6.	ಕಾಗ್ನಾ	-	2.00	8300	–	8300	–	51.91
7.	ಬಸಾಪುರ ಏತ	K-8	0.60	2276	–	2276	2.44	14.05

1	2	3	4	5	6	7	8	9
8.	ಇಟಗಿ–ಸಾಸಲ್‌ವಾಡ್ ಏ.ನೀ.ಯೋ.	K-8	0.55	1983	–	1983	0.77	16.89
9.	ಭದ್ರಾ ಮೇಲ್ದಂಡೆ–ಘಟ್ಟ–1	K-8	10.00	0	–		–	2813
10.	ಬೆಣ್ಣೆಹಳ್ಳ	-	1.80	7200	–	7200	–	17.33
11.	ಕೆ.ಆರ್.ಬಿ.ನಿ.ಯ 36ನೇ ಕಿ.ಮೀ.ಏತ	-	0.30	0	–	0	–	2.25
12.	ಸೋಂತಿ	-	4.00	5600	–	5600	–	11.50
13.	ಗುಡ್ಡದ ಮಲ್ಲಾಪುರ ಏತ	-	1.00	–	–	526	–	60.0
14.	ಬಕ್ರಿಹಳ್ಳ ಏ.ನೀ.ಯೋ	-	0.21	526				6.90
15.	ಶ್ರೀ ರಾಮೇಶ್ವರ ಏ.ನೀ.ಯೋ.	-	2.200	0	–	0	–	218.42
		ಒಟ್ಟು III=	**35.65**	**65985**	**0**	**65985**	**3.21**	**3504.46**

1	2	3	4	5	6	7	8	9
			IV. ಇತರೆ					
1.	ಕೈಗಾರಿಕಾ ನೀರು ಸರಬರಾಜು	K-1	0.50	–	–	–	–	–
2.	ಗೃಹೋಪಯೋಗಿ ಹಾಗೂ ಪುರಸಭೆಗಳಿಗೆ ನೀರು ಸರಬರಾಜು	–	1.50	–	–	–	–	–
3.	ಸಣ್ಣ ನೀರಾವರಿ	–	87.15	**514599**	**501511**	**13088**	–	–
		ಒಟ್ಟು IV=	**89.15**	**514599**	**501511**	**13088**	**0**	**0**
		ಒಟ್ಟು I+II+III+IV=	**729.00**	**2639495.00**	**2028760.00**	**610735.00**	**17338.96**	**8319.54**
1.	ಚೆನ್ನೈ ನೀರು ಸೌಲಭ್ಯ	–	5.00	0	0	0	0	0
		ಒಟ್ಟು=	**734.00**	**2639495.00**	**2028760.00**	**610735.00**	**17338.96**	**8319.54**